# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ:ಸಿ5(3)ಉ.ನಿ. ಹಣ ಬಿಡುಗಡೆ 5/2013–14 ದಿನಾಂಕ:08–10–2013

## ಜ್ಞಾಪನಾ

ವಿಷಯ: 2013–14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಉಪ ನಿರ್ದೇಶಕರು, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಕಂಪ್ಯೂಟರ್ ಸ್ಟೇಷನರಿ ಮುಂತಾದವುಗಳ ಖರೀದಿಗೆ ಆಯವ್ಯಯ ಬಿಡುಗಡೆ ಮಾಡಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂ. ಇಡಿ 63 ಯೋಯೋಕ 2013 ಬೆಂಗಳೂರು ದಿನಾಂಕ:1–04–2013

2. ಈ ಕಛೇರಿಯ ಯೋಜನಾ ಶಾಖೆಯ ಜ್ಞಾಪನ ಸಂಖ್ಯೆ: ಯೋ(1) ಮು.ಯೋ ಕಾ ಹ ಬಿ 1/2013–14 ದಿನಾಂಕ:09–04–2013

2013–14ನೇ ಸಾಲಿನಲ್ಲಿ ಉಲ್ಲೇಖ (1)ರಲ್ಲಿನ ಸರ್ಕಾರದ ಆದೇಶದಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು ಹಾಗು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಿಗೆ ಕಂಪ್ಯೂಟರ್ ಪೇಪರ್ ಹಾಗೂ ಲೇಖನ ಸಾಮಗ್ರಿಗಳನ್ನು ಖರೀದಿಸುವ ಸಲುವಾಗಿ "ಪರಿವೀಕ್ಷಣೆ ಪ್ರಾಥಮಿಕ "ಲೆಕ್ಕ ಶೀರ್ಷಿಕೆ **2202-01-104-0-00-059** (ಯೋಜನೆ) ಯಲ್ಲಿ ರೂ.60.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದ್ದು ಈ ಹಣದಲ್ಲಿ ರಾಜ್ಯದಲ್ಲಿನ 34 ಉಪನಿರ್ದೇಶಕರ ಕಛೇರಿಗಳಿಗೆ ಹಾಗೂ ಬಿ.ಇ.ಓ ಕಛೇರಿಗಳಿಗೆ ಕಂಪ್ಯೂಟರ್ ಸ್ಟೇಷನರಿ ಹಾಗೂ ಸಾದಿಲ್ವಾರು ವೆಚ್ಚಕ್ಕಾಗಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಹಂಚಿಕೆ ಮಾಡಿ ಅನುಬಂಧದಲ್ಲಿ ವಿವರಿಸಿರುವಂತೆ ಅನುದಾನವನ್ನು ಡ್ರಾ ಮಾಡಲು ಅನುಮತಿ ನೀಡಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

**ಕಛೇರಿ ಸಾದಿಲ್ವಾರು ವೆಚ್ಚ ಭರಿಸುವ ಪೂರ್ವದಲ್ಲಿ ಈ ಕೆಳಕಂಡ ಷರತ್ತುಗಳನ್ನು ತಪ್ಪದೆ ಪಾಲಿಸುವುದು.**

1. ಬಿಡುಗಡೆ ಮಾಡಿರುವ ಹಣವನ್ನು ಕಛೇರಿ ಸಾದಿಲ್ವಾರು ವೆಚ್ಚಕ್ಕಾಗಿ ಮಾತ್ರ ವಿನಿಯೋಗಿಸುವುದು
2. 30–10–2013ರ ಒಳಗಾಗಿ ಬಿಡುಗಡೆ ಮಾಡಿರುವ ಆಯವ್ಯಯವನ್ನು ಖರ್ಚುಮಾಡಿ ಅದಕ್ಕೆ ಸಂಬಂಧಿಸಿದ ಬಳಕೆ ಪ್ರಮಾಣ ಪತ್ರವನ್ನು ಈ ಕಛೇರಿಗೆ ತಪ್ಪದೆ ಕಳುಹಿಸುವುದು.
3. ಬಿಡುಗಡೆ ಮಾಡಿರುವ ಆಯವ್ಯಯವನ್ನು ಆಯಾ ಬಾಬ್ತುಗಳಿಗೆ ಮಾತ್ರ ಬಳಕೆ ಮಾಡುವುದು ಇನ್ನಿತರೆ ಕಾರ್ಯಗಳಿಗೆ ಉಪಯೋಗಿಸುವಂತಿಲ್ಲ.
4. ಮೇಲೆ ನಿಗದಿ ಮಾಡಿರುವ ಅವಧಿಯಲ್ಲಿ ಈ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಲ್ಲಿ ಪ್ರಥಮ ಆದ್ಯತೆಯನ್ನು ನೀಡುವುದು.
5. ಬಿಡುಗಡೆ ಮಾಡಲಾಗಿರುವ ಅನುದಾನವನ್ನು ಬಳಸದೆ ಲ್ಯಾಪ್ಸ್ ಮಾಡಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗುವುದು. ಒಂದು ವೇಳೆ ಸಾಮಗ್ರಿ ಖರೀದಿಸಿ ಖಜಾನೆಯಿಂದ ಹಣ ಡ್ರಾ ಮಾಡಲು ವಿಫಲವಾದಲ್ಲಿ ಈ ಹಣವನ್ನು ಯಾವುದೇ ಕಾರಣಕ್ಕೂ ಮುಂದಿನ ಆರ್ಥಿಕ ವರ್ಷದಲ್ಲಿ ಈ ಕಛೇರಿಯಿಂದ ಹಣ ಬಿಡುಗಡೆ ಮಾಡಲಾಗುವುದಿಲ್ಲ. ಇಂತಹ ಬೇಡಿಕೆಗಳನ್ನು ಸಲ್ಲಿಸದಂತೆ ಮುಂಜಾಗ್ರತೆ ವಹಿಸುವುದು.
6. ಲೇಖನ ಸಾಮಗ್ರಿಗಳನ್ನು ಖರೀದಿಸುವ ಸಂದರ್ಭದಲ್ಲಿ ಖರೀದಿ ನಿಯಮಗಳನ್ನು ತಪ್ಪದೆ ಪಾಲಿಸುವುದು. ತಪ್ಪಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
7. ಸಾದಿಲ್ವಾರು ಬಿಲ್ಲಿಗೆ ಮೇಲು ರುಜು ಅಗತ್ಯವಿದ್ದಲ್ಲಿ ಅದನ್ನು ಸಂಬಂಧಪಟ್ಟ ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಯವರಿಂದ / ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿ ನಿರ್ದೇಶಕರು, ವಿಭಾಗೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ರವರಿಂದ ಮೇಲು ಸಹಿ ಪಡೆದುಕೊಳ್ಳುವುದು.
8. ಕಳೆದ ಸಾಲಿನಲ್ಲಿ ನಿಮ್ಮ ಜಿಲ್ಲೆಗೆ ಒದಗಿಸಿದ ಆಯವ್ಯಯವನ್ನು ಸಕಾಲದಲ್ಲಿ ಬಳಸದೆ ಆರ್ಥಿಕ ವರ್ಷದ ಅಂತ್ಯದವರೆವಿಗೂ ಕಾಯ್ದಿರಿಸಿರುವುದನ್ನು ತೀವ್ರವಾಗಿ ಪರಿಗಣಿಸಲಾಗಿದೆ. ಸಕಾಲದಲ್ಲಿ ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಬಳಕೆ ಪ್ರಮಾಣ ಪತ್ರವನ್ನು ನಿಗದಿತ ಅವಧಿಯಲ್ಲಿ ಕಳುಹಿಸುವಂತೆ ಸೂಚಿಸಿದೆ.
9. **ಅನುಬಂಧದ ಕಾಲಂ(3)ರಲ್ಲಿ ಬಿಡುಗಡೆ ಮಾಡಿದ ಹಣವನ್ನು ಖರ್ಚು ಮಾಡಿ, ಉಪಯೋಗ ಪ್ರಮಾಣ ಪತ್ರ ಸ್ವೀಕೃತವಾದ ನಂತರ ತ್ರೈಮಾಸಿಕ ಮೊತ್ತ [1/4 ಭಾಗ] ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ತಪ್ಪಿದಲ್ಲಿ ಮುಂದಿನ ಕಂತುಗಳ ಹಣವನ್ನು ಬಿಡುಗಡೆ ಮಾಡಲಾಗುವುದಿಲ್ಲ.**

ಈ ಮೇಲಿನ ಎಲ್ಲಾ ಸೂಚನೆಗಳನ್ನು ತಪ್ಪದೆ ಪಾಲಿಸಿ ಖರೀದಿ ಪ್ರಕ್ರಿಯೆಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವಂತೆ ಎಲ್ಲಾ ಉಪ ನಿರ್ದೇಶಕರುಗಳಿಗೆ ಸೂಚಿಸಲಾಗಿದೆ.

[ಹೆಚ್.ಎಸ್. ರಾಮರಾವ್]
ಅಪರ ಆಯುಕ್ತರು [ಆಡಳಿತ] [ಹೆ.ಪ್ರ]
8/10/13 8/10/13

ಇವರಿಗೆ,

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ, ಮತ್ತು ಗುಲ್ಬರ್ಗಾ ಆಯುಕ್ತಾಲಯ,
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ,
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ,
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ,
5. ರಾಜ್ಯದ ಎಲ್ಲಾ ಖಜಾನಾಧಿಕಾರಿಗಳಿಗೆ,
6. ಉಪ ನಿರ್ದೇಶಕರು (ಯೋಜನೆ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸುತ್ತಾ ಅನುಬಂಧದ ಕಾಲಂ (3)ರಲ್ಲಿ ನಮೂದಿಸಿರುವಂತೆ ಆಯಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ ಖಜಾನೆಯಲ್ಲಿ ಗಣಕೀಕರಣ ಮಾಡಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.
7. ಕಛೇರಿ ಪ್ರತಿ.

# ಅನುಬಂಧ

ದಿನಾಂಕ:08-10-2013

**2013-14ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರ ಕಛೇರಿ ಸಾದಿಲ್ವಾರು ವೆಚ್ಚಕ್ಕಾಗಿ ಉಪ ನಿರ್ದೇಶಕರುಗಳಿಗೆ ಹಂಚಿಕೆ ಮಾಡಿರುವ ಹಣ**

| ಕ್ರ ಸಂ | ಜಿಲ್ಲೆಗಳು | [1/4th] ಎರಡನೇ ತ್ರೈಮಾಸಿಕದ ಬಿಡುಗಡೆ |
|---|---|---|
| 1 | 2 | 3 |
| 1 | ಬೆಂಗಳೂರು ಉತ್ತರ | 10500.00 |
| 2 | ಬೆಂಗಳೂರು ದಕ್ಷಿಣ | 12800.00 |
| 3 | ಬೆಂಗಳೂರು ಗ್ರಾಮಾಂತರ | 10500.00 |
| 4 | ಕೋಲಾರ | 14700.00 |
| 5 | ಚಿಕ್ಕಬಳ್ಳಾಪುರ | 14700.00 |
| 6 | ತುಮಕೂರು | 14700.00 |
| 7 | ಮಧುಗಿರಿ | 10500.00 |
| 8 | ಶಿವಮೊಗ್ಗ | 16800.00 |
| 9 | ಚಿತ್ರದುರ್ಗ | 14700.00 |
| 10 | ದಾವಣಗೆರೆ | 16800.00 |
| 11 | ರಾಮನಗರ | 10500.00 |
| 12 | ಮೈಸೂರು | 21000.00 |
| 13 | ಚಾಮರಾಜನಗರ | 12600.00 |
| 14 | ಮಂಡ್ಯ | 18900.00 |
| 15 | ಹಾಸನ | 18900.00 |
| 16 | ಚಿಕ್ಕಮಗಳೂರು | 18900.00 |
| 17 | ಕೊಡಗು | 8400.00 |
| 18 | ದಕ್ಷಿಣ ಕನ್ನಡ | 16800.00 |
| 19 | ಉಡುಪಿ | 12600.00 |
| 20 | ಬೆಳಗಾವಿ | 16800.00 |
| 21 | ಚಿಕ್ಕೋಡಿ | 18900.00 |
| 22 | ಬಿಜಾಪುರ | 16800.00 |
| 23 | ಬಾಗಲಕೋಟೆ | 14700.00 |
| 24 | ಧಾರವಾಡ | 16800.00 |
| 25 | ಗದಗ | 14700.00 |
| 26 | ಹಾವೇರಿ | 16800.00 |
| 27 | ಉತ್ತರ ಕನ್ನಡ | 12600.00 |
| 28 | ಗುಲ್ಬರ್ಗಾ | 18900.00 |
| 29 | ಯಾದಗಿರಿ | 8400.00 |
| 30 | ಬಳ್ಳಾರಿ | 18900.00 |
| 31 | ರಾಯಚೂರು | 12600.00 |
| 32 | ಕೊಪ್ಪಳ | 10500.00 |
| 33 | ಬೀದರ್ | 12600.00 |
| 34 | ಶಿರಸಿ | 14700.00 |
| | ಒಟ್ಟು | **5,00,000.00** |

[ಹೆಚ್.ಎಸ್. ರಾಮನಾಥ್]
ಅಪರ ಆಯುಕ್ತರು(ಆಡಳಿತ)ಶಿ.ಪ್ರ.

8/10/13